**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸ್ಪೆಷಲ್ ಮೊಕದ್ದಮೆ ನಂಃ 24/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | - ನಾಗರಾಜ | ಪಿಡಬ್ಲೂ - 11 |
| ತಂದೆಯ ಹೆಸರು | - ಅಮಾಸಯ್ಯ | ಸಿಡಬ್ಲೂ -19 |
| ವಯಸ್ಸು | - 53 ವರ್ಷ | |
| ಉದ್ಯೋಗ | - ತಹಶೀಲ್ದಾರ್ ಗ್ರೇಡ್- II, ಹಾಸನ ತಾಲ್ಲೂಕು ಕಛೇರಿ, ಹಾಸನ | |
| ವಾಸ ಸ್ಥಳ | - ಹಾಸನ | |

*(*ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ನಾನು ದಿನಾಂಕ 21.06.2021 ರಿಂದ ದಿನಾಂಕ 02.02.2023 ರವರೆಗೆ ಮೂಡಿಗೆರೆ ತಾಲ್ಲೂಕಿನ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರ ದಿಃ 29-11-2021

ರ ಮನವಿಯು ದಿನಾಂಕಃ 30-11-2021 ರಂದು ನಮ್ಮ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ. ಸದರಿ ಮನವಿಯಲ್ಲಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 352/2021 ಪ್ರಕರಣದ ಮೃತ ಶೇಷಪ್ಪ @ ಶಶಿ ಬಿನ್ ಶಾಂತಪ್ಪ ರವರ ಜಾತಿ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿದ್ದರು. ಸದರಿ ಮನವಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.24 ಎಂದು ಗುರುತಿಸಲಾಯಿತು.

3. ಅದರ ಮೇರೆಗೆ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳನ್ನು ಬಿದರಹಳ್ಳಿ ಗ್ರಾಮಕ್ಕೆ ಕಳುಹಿಸಿ ಅವರಿಂದ ಪರಿಶೀಲಿಸಿ ವರದಿಯನ್ನು ದಿಃ 06-01-2022 ರಂದು ಪಡೆದುಕೊಂಡಿದ್ದೆನು. ಆನಂತರ ಆ ಬಗ್ಗೆ ಮೃತನ ತಂದೆಯಾದ ಶಾಂತಪ್ಪ ಬಿನ್ ರಾಜುರವರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ಅವರ ಜಾತಿಪ್ರಮಾಣಪತ್ರವನ್ನು ಪಡೆದುಕೊಂಡಿದ್ದೇನೆ. ಅದರ ಮೇರೆಗೆ ಮೃತ ಶೇಷಪ್ಪರವರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ದಿಃ 15-02-2022 ರಂದು ತನಿಖಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದೆನು. ಸದರಿ ಜಾತಿಪ್ರಮಾಣಪತ್ರ ಮತ್ತು ವರದಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.25 ಮತ್ತು ಪಿ.26 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ

ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

4. ನೀವು ಶೇಷಪ್ಪರವರ ಜಾತಿ ಪ್ರಮಾಣಪತ್ರವನ್ನು ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಮೃತಪಟ್ಟಿದ್ದರಿಂದ ಮತ್ತು ಅವರು ಅರ್ಜಿಯನ್ನು ಸಲ್ಲಿಸದೇ ಇರುವ ಕಾರಣ ಅವರ ಜಾತಿ ಪ್ರಮಾಣಪತ್ರವನ್ನು ನೀಡಿಲ್ಲ, ಅವರ ತಂದೆಯವರ ಜಾತಿ ಪ್ರಮಾಣಪತ್ರವನ್ನು ನೀಡಿದ್ದೇನೆ ಎನ್ನುತ್ತಾರೆ. ಮೃತಪಡುವ ಪೂರ್ವದಲ್ಲಿ ಶೇಷಪ್ಪ ಯಾವ ಜಾತಿ ಸೇರಿದ್ದರು ಎಂದು ನಿಮ್ಮ ದಾಖಲೆಗಳ ಪ್ರಕಾರ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ರಾಜಸ್ವ ನಿರೀಕ್ಷಕರು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರನ್ನು ವಿಚಾರಣೆ ಮಾಡಿ ಆ ಬಗ್ಗೆ ವರದಿಯನ್ನು ಸಲ್ಲಿಸಿದ್ದರು. ಅವುಗಳನ್ನು ನೀವು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಿಮಗೆ ಮೃತನ ಜಾತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ತನಿಖಾಧಿಕಾರಿಗಳೊಂದಿಗಿನ ವಿಶ್ವಾಸದ ಮೇರೆಗೆ ನಿಪಿ.25 ಮತ್ತು ಪಿ.26 ರಂತೆ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ